


ಇವನೂ, ಕಳೆದಕ್ಟೋಬರಿನಲ್ಲಷ್ಟೇ ಅರವತ್ತೆರಡು ಹೊಕ್ಕ, ಅವನಷ್ಟೇ ಕಟು ಮರಾಠಸ್ಥಳಾದ ಅವಳೂ ಸ್ವಯಂಘೋಷಿತ ನಿವೃತ್ತಿಯನ್ನೂ, ಕೈಮೈತುಂಬಿ ತುಳುಕುವಷ್ಟಿರುವ ಕೆಲಸವಿಲ್ಲದ ವಿರಾಮವನ್ನೂ ಹಾಗೂ ಹೀಗೂ ಮೀಂಟಿ ಮೀಂಟಿ ದಾಟುತ್ತಿದ್ದಾರೆ. ಮೂವ್ವತ್ತೈದು ವರ್ಷಗಳ ಪ್ರಣಯಭರಿತ ದಾಂಪತ್ಯವನ್ನು, ಒನ್ನಮೂನೆ ಸುಸ್ನೇಹಸಾಂಗತ್ಯವೆಂಬಂತೆ ಕಳೆದಿರುವ ಗಂಡಹೆಂಡತಿಯಿಬ್ಬರೂ ಓದಿನಿಂದ ಆರ್ಕಿಟೆಕ್ಟುಗಳಾಗಿದ್ದು, ವೃತ್ತಿಯನ್ನೂ ತಮ್ಮದೇ ಸ್ವಂತ ಆಫೀಸು ಕಟ್ಟಿಕೊಂಡು ಕಳೆದಿದ್ದಾರೆ. ಓದಿನ ದಿವಸಗಳಲ್ಲಿ, ಸೂರತ್ತಿನ ಕಾಲೇಜಿನಲ್ಲಿ ಪ್ರೀತ್ಯಂಕುರಿಸಿತಾಗಿ ಪರಸ್ಪರ ಒಲಿದು ವರಿಸಿಕೊಂಡ ಇಬ್ಬರೂ, ಒಬ್ಬರಿಗೊಬ್ಬರು ಹೇಳಿಮಾಡಿಸಿದಂತಿದ್ದಾರೆ. ಮದುವೆಯಾದ ಮೂರನೇ ವರ್ಷಕ್ಕೆಲ್ಲ, ಇಬ್ಬರ ಉತ್ಕಟ ಪ್ರಣಯ ಫಲಿಸಿತೆಂಬಂತೆ ಐತರಿಸಿಬಂದ ಇಂದ್ರನೀಲ ಥಾಪಸೆ ಎಂಬಾತನಿಗೆ, ಸದ್ಯಕ್ಕೆ ಮೂವ್ವತ್ತೆರಡು ನಡೆಯುತ್ತಿದ್ದು, ನಾಲ್ಕು ವರ್ಷಗಳಿಂದ, ಹೆಂಡತಿ ಮತ್ತು ಎರಡು ಅವಳಿ ಗಂಡುಮಕ್ಕಳೊಡನೆ ವಾಯವ್ಯಅಮೆರಿಕೆಯ ಸಿಯಾಟಲಿನಲ್ಲಿ ನೆಲೆಸಿದ್ದಾನೆ. ರುದ್ರನೀಲ ಮತ್ತು ರೇಣುಯುಕ್ತಿಯರೆಂಬ ಈ ಥಾಪಸೆದಂಪತಿಗೆ ಸದ್ಯಕ್ಕಿರುವ ಒಂದೇ ಕೊರತೆಯೆಂದರೆ, ಈ ಮಗನೆಂಬ ಮಗರಾಯನು ಒಡನಿಲ್ಲದಿರುವುದು ಮಾತ್ರ. ರುದ್ರನೀಲ ಥಾಪಸೆಗೆ ಅಮೆರಿಕೆಯೇ ತನ್ನ ಸರ್ವದಾ ಕರ್ಮಸ್ಥಳವೆಂದು ನಂಬಿರುವ ಮಗರಾಯನೊಡನೆ ಸಂದುಕೊಂಡು ನೆಲೆಸುವುದು ಒಂದಿಷ್ಟೂ ಇಷ್ಟವಿಲ್ಲ. ಅವನಿಗಿಂತಲೂ ರೇಣುಯುಕ್ತಿಗೂ, ಸದರಿ ವಿಚಾರ ಯುಕ್ತವೆನಿಸಿಲ್ಲ. ಇಳಿಗಾಲದಲ್ಲಿ ಕಾಣದ ದೇಶ ಹೊಕ್ಕು, ಮಗನ ಸಂಪಾದಿಸಿದ ದುಡ್ಡಿನ